# ಶಿಕ್ಷಾಮಿತ್ರ | ಒಂದು ಪ್ರಾಯೋಗಿಕ ಶಾಲೆ ಮತ್ತು ಸಂಪನ್ಮೂಲ ಕೇಂದ್ರ

ಸುದೇಷ್ಣಾ ಸಿನ್ಹಾ

ವಿಶೇಷ ಶಿಕ್ಷಣದಲ್ಲಿರುವ ಹಿನ್ನೆಲೆ ಹಾಗೂ ಕೋಲ್ಕತ್ತಾದಲ್ಲಿ (1994–2004) ವಲಸೆ ಮಕ್ಕಳಿಗಾಗಿ ಹಿಂದಿ ಮಾಧ್ಯಮ ಶಾಲೆಯನ್ನು ನಡೆಸುವಲ್ಲಿನ ಹಲವು ವರ್ಷಗಳ ಅನುಭವ ಎರಡೂ ಸೇರಿ ನನ್ನನ್ನು ಮತ್ತು ನನ್ನ ಆತ್ಮೀಯ ಜೊತೆಗಾರರನ್ನು ಹಲವಾರು ಬಾರಿ ಮಕ್ಕಳ ಶಿಕ್ಷಣದ ಅಗತ್ಯಗಳನ್ನು ಅದರಲ್ಲೂ ವಿಶೇಷವಾಗಿ ಕಡಿಮೆ ಆದಾಯದ ಗುಂಪಿನ ಮಕ್ಕಳ ಅಗತ್ಯಗಳನ್ನು ವಿಶ್ಲೇಷಿಸುವಂತೆ ಮಾಡಿವೆ. ಈಗಾಗಲೇ ಬಹಳಷ್ಟು ಮಂದಿಗೆ ತಿಳಿದಿರುವ ವಿಷಯವನ್ನು ನನ್ನ ಇಷ್ಟು ಅನುಭವವೂ ನನಗೆ ಮನದಟ್ಟು ಮಾಡಿದೆ. ಅಂದರೆ ಎಲ್ಲರಿಗೂ ಹತ್ತು – ಹನ್ನೆರಡು ವರ್ಷಗಳ ಕಾಲ ಒಂದೇ ಬಗೆಯ ನಿರ್ಧರಿತ ಪಠ್ಯಕ್ರಮವನ್ನು ಭಾಷೆಯಲ್ಲಿ ಬೋಧಿಸುವ ವ್ಯವಸ್ಥೆಯು ಯಾವುದೇ ರೀತಿ ಅವರವರ ವೈಯಕ್ತಿಕತೆ ಮತ್ತು ಸಾಮರ್ಥ್ಯಗಳಿಗೆ ಗೌರವ ನೀಡುವುದಿಲ್ಲ. ಜೊತೆಗೆ ಅವರ ಮುಂದಿನ ಬದುಕಿಗೆ ಉತ್ತಮವಾಗಿ ಸಿದ್ಧ ಮಾಡುವುದಿಲ್ಲ. ಅಷ್ಟೇ ಅಲ್ಲ ವ್ಯವಸ್ಥೆಯೊಳಗೆ ಹೊಂದಿಕೊಳ್ಳಲು ಪ್ರಯತ್ನಪಡುತ್ತಲೇ ಅಂಚಿನಲ್ಲಿದ್ದ ಬಹಳಷ್ಟು ಮಂದಿ ತಮ್ಮ ಬದುಕಿನ ಕೌಶಲ್ಯಗಳನ್ನು ಕಳೆದುಕೊಂಡು ಹೊರದೂಡಲ್ಪಟ್ಟರು.

2004ರಲ್ಲಿ ಕೆಲವು ಜೊತೆಗಾರರೊಂದಿಗೆ, ನಾನು 10ರಿಂದ 14 ವರ್ಷದ ವಯೋಮಾನದ ಸೃಜನಾತ್ಮಕ ಮತ್ತು ಉತ್ತಮ ತಾರ್ಕಿಕತೆಯ ಸ್ಥಿತಿಯಲ್ಲಿದ್ದ ಮಕ್ಕಳಿಗೆ ಬಂಗಾಲಿ ಮಾಧ್ಯಮದ ಶಾಲೆಯನ್ನು ತೆರೆಯಲು ನಿರ್ಧರಿಸಿದೆನು. ಆ ಮಕ್ಕಳು ಅವರು ಬಹಳ ಸೂಕ್ಷ್ಮ ಸ್ಥಿತಿಯಲ್ಲಿದ್ದು ಶಾಲೆಯಿಂದ ಹೊರ ಬೀಳುವ ಸಾಧ್ಯತೆಗಳು ಹೆಚ್ಚಿತ್ತು. ಅಲ್ಲದೆ ಆ ವಯಸ್ಸಿನಲ್ಲಿ ಮಕ್ಕಳು ಮೂಲ ಅಕ್ಷರ ಜ್ಞಾನ ಮತ್ತು ಸಂಖ್ಯೆಗಳ ಜ್ಞಾನವನ್ನು ಪಡೆದುಕೊಂಡಿರಬೇಕೆಂಬ ನಿರೀಕ್ಷೆ ಇದ್ದಿತು. ಹಾಗಾಗಿ ನಮ್ಮ ಚಿಂತನೆಯಲ್ಲಿದ್ದ ವಿವಿಧ ಪಠ್ಯಕ್ರಮದ ಪ್ರಯೋಗಗಳಿಗೆ ನಾವು ಸಿದ್ಧರಾಗಿದ್ದೆವು.

**ಆರಂಭ (2005–2011)**

ನಾವು ದಕ್ಷಿಣ ಕೋಲ್ಕತ್ತದ ಪ್ರಸಿದ್ಧ ಕಾಳಿಘಾಟ್ ದೇವಸ್ಥಾನದ ಸಮೀಪದಲ್ಲಿದ್ದ ಚೇಟ್ಲಾ ಎಂಬ ಪ್ರದೇಶದಲ್ಲಿ ಒಂದು ಸ್ಥಳವನ್ನು ಆಯ್ಕೆ ಮಾಡಿಕೊಂಡೆವು. ಸುತ್ತಮುತ್ತಲಿನ ನೋಂದಣಿಯಾಗಿರುವ ಕೊಳೆಗೇರಿಗಳಲ್ಲಿ ಸಮೀಕ್ಷೆ ನಡೆಸಿದಾಗ, ನಾವು ಅಲ್ಲಿನ ಜನರಿಗೆ ಸುಮಾರು ಎರಡು ತಿಂಗಳ ಕಾಲ ಹೊಸ ಶಾಲೆಯ ಪರಿಕಲ್ಪನೆಗಳನ್ನು ಪದೇಪದೇ ವಿವರಿಸುತ್ತಿದ್ದೆವು. 17 ಮಕ್ಕಳು ದಾಖಲಾಗುವುದರೊಂದಿಗೆ ಏಪ್ರಿಲ್ 2005ರಲ್ಲಿ 'ಶಿಕ್ಷಾಮಿತ್ರ' ಆರಂಭವಾಯಿತು. ಹೆಚ್ಚಿನ ಮಕ್ಕಳು ಸರ್ಕಾರಿ ಶಾಲೆಗೆ ಹೋಗುತ್ತಿದ್ದರು, ಕೆಲವರು ಶಾಲೆಯಿಂದ ಹೊರಬಿದ್ದವರಾಗಿದ್ದರು. ಎಲ್ಲರೂ ತಮ್ಮ ಶಾಲೆಗಳ ಬಗ್ಗೆ ಬೇಸರದ ಭಾವನೆ ಹೊಂದಿದ್ದರಾದರೂ ಹೊಸತನ್ನು ಪ್ರಯತ್ನಿಸಲು ಬಂದಿದ್ದರು. 'ಶಿಕ್ಷಾಮಿತ್ರ' ಶಾಲೆಯು ಸುಮಾರು ಆರು ವರ್ಷಗಳ ಕಾಲ ನಡೆಯಿತು ಮತ್ತು ಕೊನೆಯವರೆಗೂ ದಾಖಲಾತಿ ಸಂಖ್ಯೆಯು 25ರಿಂದ 30ರ ಮಧ್ಯದಲ್ಲಿತ್ತು.

**ಮೊದಲಿನ ಅವಧಿಯ ಅಲ್ಲೋಲಕಲ್ಲೋಲ**

ಈ ಮಕ್ಕಳು ಪ್ರಕ್ಷುಬ್ಧರೂ, ಆಕ್ರಮಣಶೀಲರೂ ಹಾಗೂ ಶಿಕ್ಷಕ ಸಮುದಾಯದೆಡೆಗೆ ತಮ್ಮ ಗುಮಾನಿಯನ್ನು ಮತ್ತು ತಿರಸ್ಕಾರವನ್ನು ಬಹಿರಂಗವಾಗಿ ತೋರಿಸಿಕೊಳ್ಳುವವರೂ ಆಗಿದ್ದರು. ಹಿಂಸಾ ಪ್ರವೃತ್ತಿಗೆ ತುತ್ತಾಗಬಲ್ಲ ಅವರು ಕಲಿಕೆಗೆ ವಿಮುಖರೂ ಆಗಿದ್ದರು. ಇವರಿಗೆ ಕಲಿಸುವಾಗ ನಾವು ಸಾಕಷ್ಟು ಕಲಿಕಾ ಯೋಜನೆಗಳನ್ನು ಮುಂದೂಡಬೇಕಾಯಿತು. ಕಲೆ ಮತ್ತು ಜೇಡಿಮಣ್ಣಿನ ಕೆಲಸಗಳು ಮಕ್ಕಳನ್ನು ಸ್ವಲ್ಪಮಟ್ಟಿಗೆ ಶಾಂತಗೊಳಿಸಲು ಸಹಾಯ ಮಾಡಿದವು. ಬಿಡುವಿನ ಸಮಯ, ತರಗತಿಯಲ್ಲಿನ ಬೋಧನೆ, ಹೊರಗೆ ಆಡುವ ಆಟಗಳು, ಶಾಲೆಯ ಮುಚ್ಚುವ ವೇಳೆ, ಮನೆಯಲ್ಲಿ ಕಳೆದ ಸಮಯ ಮುಂತಾದವುಗಳ ಬಗ್ಗೆ ನಟನೆಯ ಮೂಲಕ ಮಾಡಿ ತೋರಿಸಲು ಮಕ್ಕಳಿಗೆ ಹೇಳಲಾಯಿತು. ನಟನೆಯ ಮುಸುಕಿನ ಹಿಂದೆ ಮಕ್ಕಳು ಅಂಚಿನಲ್ಲಿರುವುದರಿಂದ ತಾವು ತಮ್ಮ ಸುತ್ತಮುತ್ತಲು ಮತ್ತು ಹಿಂದಿನ ಶಾಲೆಗಳಲ್ಲಿ ಅನುಭವಿಸಿದ ಅವಹೇಳನ ಮತ್ತು ಕ್ರೌರ್ಯದ ಹಲವಾರು ಕಥೆಗಳನ್ನು ಪ್ರಸ್ತುತಪಡಿಸಿದರು. ಜೊತೆಗೆ ಹೇಗೆ ಅವರು ಪ್ರತೀಕಾರ ಧೋರಣೆಯಿಂದ ಶರಣಾಗತಿಯ ಮನಸ್ಥಿತಿಗೆ, ಕೊನೆಯಲ್ಲಿ ಕೈಚೆಲ್ಲುವ ಪರಿಸ್ಥಿತಿಗೆ ತಲುಪಿದರು ಎಂಬುದನ್ನು ತೋರಿಸಿದರು.

ಈ ಪಾತ್ರ – ನಟನೆಗಳು ನಿಧಾನವಾಗಿ ಹಂತಹಂತವಾಗಿ ಅರ್ಥ ಮಾಡಿಕೊಳ್ಳುವಿಕೆಯ ಸೇತುವೆಯನ್ನು ನಿರ್ಮಿಸಿದವು. ಶಿಕ್ಷಕರು ಮತ್ತು ಮಕ್ಕಳು ಒಟ್ಟಿಗೆ ಕುಳಿತು ಸಮಸ್ಯೆಗಳು, ತೊಂದರೆಗಳು, ಸಂತಸದ ಕ್ಷಣಗಳ ಬಗ್ಗೆ ಚರ್ಚಿಸುವ ಹಾಗೂ ಶಾಲಾ ಚಟುವಟಿಕೆಗಳನ್ನು ಸಲಹೆಗಳೊಂದಿಗೆ ಪರಾಮರ್ಶಿಸುವಂತಹ ಮುಕ್ತ ಅವಕಾಶವನ್ನು ಪ್ರಾರಂಭಿಸುವ ಸ್ಥಿತಿಗೆ ತಲುಪಲು ಸಹಾಯವಾಯಿತು. ಸಹಕಾರ, ಕಾಳಜಿ ಹಾಗೂ ಕಲಿಯಲು ಹಾಕಿದ ಪರಿಶ್ರಮ ಮತ್ತು ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳುವ ಪ್ರಯತ್ನಗಳಿಗೆ ಪ್ರೋತ್ಸಾಹ ಮತ್ತು ಮುಕ್ತ ಮೆಚ್ಚುಗೆಗಳೊಂದಿಗೆ ಬಹುಮಾನಗಳು ಅವರಿಗೆ ಪ್ರತಿಫಲವಾಗಿ ದೊರೆತವು. ದೈಹಿಕ ಪರಿಶ್ರಮದ ಘನತೆ ಮತ್ತು ಮಾಲಿಕತ್ವದ ಭಾವನೆಯನ್ನು ಎತ್ತಿ ಹಿಡಿಯಲು ಮತ್ತು ಅವು ಆಳವಾಗಿ ಇಳಿಯುವಂತೆ ಮಾಡಲು ಶಿಕ್ಷಕರು ಮತ್ತು ಮಕ್ಕಳು ಇಬ್ಬರನ್ನೂ ಪ್ರತಿದಿನದ ಶಾಲಾ ನಿರ್ವಹಣೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗಿದೆ. ವಿವಿಧ ಚಟುವಟಿಕೆಗಳಾದ ಕಸ ಗುಡಿಸುವುದು, ಒರೆಸುವುದು, ಕಿಟಕಿ–ಬಾಗಿಲುಗಳನ್ನು ಹಾಕುವುದು, ಶೌಚಾಲಯವನ್ನು ಶುಚಿಗೊಳಿಸುವುದು, ಗಂಟೆ ಹೊಡೆಯುವುದು ಮುಂತಾದ ಕೆಲಸಗಳ ಪಟ್ಟಿಯನ್ನು ತಯಾರಿಸಿ ಕೆಲಸದ ಹೊಣೆಗಾರಿಕೆಯನ್ನು ನೀಡಲಾಯಿತು. ಕೆಲವರನ್ನು ಹೊರತುಪಡಿಸಿ, ಶಾಲಾ ಸಮುದಾಯವು ಇದನ್ನು ಒಪ್ಪಿಕೊಂಡು ಬೆಲೆ ನೀಡುವಂತಾಗಲು ಸ್ವಲ್ಪ ಸಮಯ ಹಿಡಿಯಿತು.

ಸುಮಾರು ಆರು ತಿಂಗಳಿನಲ್ಲಿ ಶಾಲೆಯು ಒಂದು ಹಂತಕ್ಕೆ ಅಚ್ಚುಕಟ್ಟಾಗಿ ನಡೆಯಲಾರಂಭಿಸಿತು. ವಾರದಲ್ಲಿ ಐದು ದಿನದಂತೆ ಸುಮಾರು 6–7 ಗಂಟೆಗಳವರೆಗೆ ಶಾಲೆಯನ್ನು ನಡೆಸಲಾಯಿತು. ಪಠ್ಯಕ್ರಮದಲ್ಲಿ ಸಾಕಷ್ಟು ಸಂಗೀತ, ಕಲೆ, ಕರಕುಶಲ, ಮಾಡುವ ಕೆಲಸಗಳು, ನೃತ್ಯ, ನಾಟಕಗಳು, ಆಟಗಳು, ಸಿನಿಮಾಗಳು, ಹಾದಿಬೀದಿಯ ಭೇಟಿಗಳು, ಹಳೆಯ ಬಂದರು, ಬಜಾರ್‌ಗಳು, ಕಲಾ ಪ್ರದರ್ಶನಗಳು, ತೋಟಗಾರಿಕಾ ಉದ್ಯಾನಗಳು, ಕರಕುಶಲ ಸಂಸ್ಥೆಗಳು ಮತ್ತು ಇವುಗಳ ಭೇಟಿ ಮುಂತಾದುವುಗಳನ್ನು ಸೇರಿಸಿಕೊಳ್ಳಲಾಗಿತ್ತು ಮತ್ತು ಸಾಮಾನ್ಯವಾಗಿ ಇವುಗಳನ್ನು ನಿಯಮಿತ ಪಠ್ಯಗಳೊಂದಿಗೆ ಸಮೀಕರಿಸಲಾಯಿತು. ಕಲೆಯ ಬಗ್ಗೆ ಬಹಳ ಒತ್ತು ನೀಡಲಾಗಿತ್ತು, ಮಕ್ಕಳನ್ನು ಸೇರಿಸಲು ಶಾಲೆಗೆ ಬಂದ ಪೋಷಕರು ಇದು ಸಂಗೀತ ಮತ್ತು ನೃತ್ಯ ಶಾಲೆ ಎಂದೇ ಭಾವಿಸಿದ್ದರು.

**ಬಂಗಾಲಿಯ ಕಲಿಕೆ**

ಎರಡು, ಮೂರು ಹಾಗೂ ನಾಲ್ಕನೇ ತರಗತಿಗಳಲ್ಲಿ ಔಪಚಾರಿಕವಾಗಿ ತೇರ್ಗಡೆ ಹೊಂದಿದ್ದರೂ ಕೂಡ 9 ಮತ್ತು 14 ವಯಸ್ಸಿನ ನಡುವಿನ ಶೇಕಡ 60 ಮಕ್ಕಳಿಗೆ ಮೂಲ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನ ಇರಲಿಲ್ಲ, ಎಷ್ಟೆಂದರೆ ಬಂಗಾಲಿಯಲ್ಲಿ ತಮ್ಮ ಹೆಸರುಗಳನ್ನು ಬರೆಯಲೂ ಕೂಡ ಕೆಲವರಿಗೆ ಬರುತ್ತಿರಲಿಲ್ಲ. ಅವರಿಗೆ ಬಂಗಾಲಿಯಲ್ಲಿ ಪ್ರಾಥಮಿಕ ಓದು ಮತ್ತು ಬರಹದ ಕೌಶಲ್ಯವನ್ನು ಕಲಿಸುವುದು ಈಗ ನಮ್ಮ ಪ್ರಮುಖ ಸವಾಲಾಗಿದ್ದಿತು. ಈ ಹಿಂದೆ ಬೇರೆಡೆ ಉತ್ತಮವಾಗಿ ಫಲ ನೀಡಿದ ವಿವಿಧ ಪದ್ಧತಿಗಳನ್ನು ನಾವು ಪ್ರಯೋಗಿಸಿದೆವು. ಇವು ಸತತವಾಗಿ ವಿಫಲವಾದಾಗ ನಾವು ಪ್ರೊಫೆಸರ್ ಜಲಾಲುದ್ದೀನ್ ಅವರು ಆರಂಭಿಸಿದ ಓದು ಖಾತರಿ ಯೋಜನೆಯೆಡೆಗೆ ಗಮನಹರಿಸಿದೆವು. ಈ ಪದ್ಧತಿಯಿಂದ ಬಹಳಷ್ಟು ಮಕ್ಕಳು ಸಾಮಾನ್ಯವಾಗಿ ಮೂರು ತಿಂಗಳಿನಲ್ಲಿ ಓದಲು ಮತ್ತು ಬರೆಯಲು ಕಲಿತರು ಕೆಲವು ಮಕ್ಕಳು ಸ್ವಲ್ಪ ಹೆಚ್ಚು ಸಮಯ ತೆಗೆದುಕೊಂಡರು.

**ಈ ಪದ್ಧತಿಯಲ್ಲಿ:**

- ಒಂದು ಚಿತ್ರ ಅಥವಾ ಕಥೆಯನ್ನು ಮಕ್ಕಳ ಸ್ವಂತ ಚಿಂತನೆಯ ದೃಷ್ಟಿಕೋನದಿಂದ ವಿವರಿಸುವುದು. ಮಕ್ಕಳು ತಮ್ಮದೇ ಭಾಷೆಯಲ್ಲಿ ಶಿಕ್ಷಕರ ಸಹಾಯದೊಂದಿಗೆ ಒಂದು ಕಥೆಯನ್ನು ಬರೆದರು. ಇದರಿಂದ ಓದುವುದು ಮತ್ತು ಬರೆಯುವುದು ಅವರಿಗೆ ಅರ್ಥಪೂರ್ಣ ಮತ್ತು ಸಂತೋಷದಾಯಕವೆನಿಸಿತು. ಅವು ಅವರದೇ ಒಂದು ಸನ್ನಿವೇಶದ ಹಿನ್ನೆಲೆಯಿಂದ ಮೂಡಿದವುಗಳಾಗಿದ್ದವಾದ್ದರಿಂದ ಪದಗಳನ್ನು ಕಲಿಯುವುದು ಮತ್ತು ನೆನಪಿನಲ್ಲಿಟ್ಟು–ಕೊಳ್ಳುವುದು ಸುಲಭವಾಯಿತು.

- ಜೊತೆಗೆ ಸ್ವರ ಚಿಹ್ನೆಗಳು ಮತ್ತು ವ್ಯಂಜನಗಳು ಮಿಳಿತವಾದ ಬಾಂಗ್ಲಾ ಬರಕ್ಕರಿ (ಗುಣಿತಾಕ್ಷರ ಮಾಲೆ) ನಕ್ಷೆಯನ್ನು ಪರಿಚಯಿಸಲಾಯಿತು.. ಒತ್ತಕ್ಷರಗಳು ಇಲ್ಲದ ಸರಳ ಪದಗಳನ್ನು ರಚಿಸಲು ಇದು ಸಹಾಯ ಮಾಡಿತು. ಇದರೊಟ್ಟಿಗೆ ಸ್ವರ (ಕಾಗುಣಿತ) ಚಿಹ್ನೆಗಳನ್ನು ಸರಿಯಾಗಿ ಬರೆಯಲು ಕಷ್ಟಪಡುತ್ತಿದ್ದ ಡಿಸ್ಲೆಕ್ಸಿಯಾ ಉಳ್ಳ ಮಕ್ಕಳಿಗೂ ಇದು ಸಹಾಯ ಮಾಡಿತು. ಬರಕ್ಕರಿಯನ್ನು ಪರಿಚಯಿಸುವ ಮುನ್ನ ಮಕ್ಕಳಿಗೆ ಬಂಗಾಲಿ ಅಕ್ಷರಗಳು ಮತ್ತು ಸ್ವರ ಚಿಹ್ನೆಗಳನ್ನು ತಿಳಿದಿದ್ದರು ಎಂಬುದನ್ನು ನಾವು ಖಚಿತಪಡಿಸಿಕೊಂಡಿದ್ದೆವು.

- ಸೂಕ್ತವಾದ ಅಭ್ಯಾಸ ಪುಸ್ತಕಗಳ ಬಳಕೆಯನ್ನು ಮೂರನೆಯ ವಿಷಯವಾಗಿ ಪರಿಚಯಿಸಿದೆವು. ಇದು ಶಿಕ್ಷಕರು ಮತ್ತು ಮಕ್ಕಳಲ್ಲಿ ಬಹಳ ಜನಪ್ರಿಯ ವಿಷಯವಾಯಿತು.

ಸರಳವಾದ ಭಾಷೆಯಲ್ಲಿರುವ ಸೂಕ್ತವಾದ ಬರಹಗಳನ್ನು ಉಪಯೋಗಿಸುವುದು ಅತಿಮುಖ್ಯ ಎಂದು ನಾವು ಬೇಗನೆ ಕಂಡುಕೊಂಡೆವು. ಎಲ್ಲರೂ ಕಲಿಯಲು ಆರಂಭಿಸುತ್ತಿದ್ದವರೇ ಆದರೂ ದೊಡ್ಡ ಮಕ್ಕಳು ಕೂಡ ಪುಟ್ಟ ಮಕ್ಕಳಿಗೆ ಉಪಯೋಗಿಸುವ ಬರಹಗಳನ್ನು ಆನಂದಿಸುತ್ತಾರೆ ಎಂದು ಹೇಳಲಾಗದು. ಪ್ರಸಿದ್ಧ ಲೇಖಕರ ಬರಹಗಳು ಚೆನ್ನಾಗಿದ್ದರೂ ಕೂಡ ಈ ಮಕ್ಕಳಿಗೆ ಮೆಚ್ಚುಗೆಯಾಗುವಂತಹವು ಬಹಳ ಕಡಿಮೆ ಇದ್ದವು. ಶಾಲೆಗೆ–ಬರುತ್ತಿರುವ ಮೊದಲ ತಲೆಮಾರಿನ ಈ ಮಕ್ಕಳಿಗೆ ಬಹಳಷ್ಟು ಸನ್ನಿವೇಶಗಳು ಅಪರಿಚಿತವಾಗಿದ್ದವು.

ಒಂದು ಪುಟಕ್ಕಿಂತ ಹೆಚ್ಚಿಲ್ಲದ ದೊಡ್ಡ ಅಕ್ಷರಗಳಲ್ಲಿ ಮುದ್ರಿತವಾಗಿರುವ ಮತ್ತು ಸ್ಥಳಾವಕಾಶವಿರುವ ಪುಟ್ಟ ಬರಹಗಳು ಹೆಚ್ಚು ಬಳಕೆಯಾಗುತ್ತಿದ್ದವು. ಹಾಗಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಸೇರಿ ಹೆಚ್ಚಾಗಿ ತಮ್ಮದೇ ಬರಹಗಳನ್ನು ತರಗತಿಯಲ್ಲಿ ರಚಿಸಲಾರಂಭಿಸಿದೆವು. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಗ್ರಿಮ್ಸ್ ಫೇರಿ ಟೇಲ್ಸ್, ಚೆಕೋವ್, ಟಾಲಸ್ಟಾಯ್, ಸುಕುಮಾರ್ ರಾಯ್, ಲೀಲಾ ಮಜುಂದಾರ್ ಮತ್ತಿತರ ಬರಹಗಾರರ ಬರಹಗಳನ್ನು ಪುಟ್ಟ ಕಥೆಗಳ ರೂಪಕ್ಕೆ ತಂದೆವು. ಸರಳ ಭಾಷೆಯಲ್ಲಿ ಆದರೂ ಸಂಕೀರ್ಣ ವಿಷಯಗಳ ದೊಡ್ಡ ಮತ್ತು ಪುಟ್ಟ ಬರಹಗಳನ್ನು ರಚಿಸುವುದರಲ್ಲಿ ಇಡೀ ಶಾಲೆಯೇ ಮುಳುಗಿಹೋಗಿತ್ತು. ವಿದ್ಯಾರ್ಥಿಗಳ ಚಿತ್ರಗಳೊಂದಿಗೆ ಇವುಗಳನ್ನು ಮುದ್ರಿಸಲು ಶಿಕ್ಷಾಮಿತ್ರವು ಆರಂಭಿಸಿತು. ಒಂದೇ ವರ್ಷದಲ್ಲಿ ಗ್ರಂಥಾಲಯದ ಪುಸ್ತಕಗಳು, ಚಿತ್ರಗಳ ಮತ್ತು ಅವುಗಳ ವಿನ್ಯಾಸಗಳ ಬಗ್ಗೆ ಆಸಕ್ತಿ ಮಾಂತ್ರಿಕವಾಗಿ ಹೆಚ್ಚಿತು.

**ಇಂಗ್ಲಿಷ್ ಕಲಿಯುವುದು**

ಮೊದಲ ತಲೆಮಾರಿನ ಓದುಗರಿಗೆ ಇಂಗ್ಲಿಷ್ ಹೇಳಿಕೊಡುವ ಸಿದ್ಧ ಮಾದರಿಯು ಬಂಗಾಲಿಗೆ ಇದ್ದಂತೆ ಇರಲಿಲ್ಲ. ಇಸಾಯ್ ಅಂಬಲಂ ಸ್ಕೂಲ್ ಹಾಗೂ ಅರೊವಿಲ್ ಇಂತಹ ಶಾಲೆಗಳಿಂದ ನಾವು ಕೆಲವು ಸಲಹೆಗಳನ್ನು ಪಡೆದೆವು ಮತ್ತು ವಿಶೇಷ ಶಿಕ್ಷಣದ ತಂತ್ರಗಳನ್ನು ಬಳಸಿಕೊಂಡೆವು. ನಮ್ಮದೇ ಆದ ಇಂಗ್ಲಿಷ್ ಪದ್ಧತಿಯನ್ನು ಪ್ರಯೋಗಗಳ ಮೂಲಕ ರಚಿಸಿಕೊಂಡೆವು. ಉಪಯೋಗಿಸಿದ ಕೆಲವು ರೀತಿಗಳೆಂದರೆ:

- ಪದಗಳನ್ನು ತಿಳಿದುಕೊಳ್ಳಲು (ವರ್ಡ್ ಅಟ್ಯಾಕ್) ಮತ್ತು ಅಕ್ಷರಗಳನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ಧ್ವನಿಗಳ ಕೌಶಲವನ್ನು ಹೇಳಿಕೊಡಲಾಯಿತು ಹಾಗೂ 50 ಪದಗಳ ಪದಸಂಪತ್ತನ್ನು ಮೂರು ತಿಂಗಳಿನಲ್ಲಿ ಪಡೆದುಕೊಳ್ಳಲು ಸಹಾಯ ಮಾಡಿದೆವು. ಮುಂದುವರೆಯುತ್ತ ಹೆಚ್ಚುಹೆಚ್ಚು ಪದಗಳನ್ನು ಪದಸಂಪತ್ತಿನಲ್ಲಿ ಸೇರಿಸಲಾಯಿತು. ವರ್ಡ್ ಅಟ್ಯಾಕ್ – ಇದೊಂದು ಮುದ್ರಿತ ಪದಗಳನ್ನು ಮಾತನಾಡುವ ಪದಗಳಿಗೆ ಹೋಲಿಸಿ, ಹೊಂದಿಸಿ ಗುರುತಿಸುವ ಕೌಶಲ, ಇದು ಓದುವುದರ ಮೂಲಾಧಾರ. ಒಂದೇ ರೀತಿಯ ಧ್ವನಿಗಳುಳ್ಳ ಪದಗಳನ್ನು ಗುರುತಿಸಲೂ ಇದು ಸೂಕ್ತವಾಗಿದೆ ಉದಾ: ಚಾಂಟ್ ಹಾಗೂ ಪ್ಯಾಂಟ್.

- ಈ ಮೂಲ ಪದಸಂಪತ್ತನ್ನು ಉಪಯೋಗಿಸಿ (ನಾಮಪದಗಳು, ಕ್ರಿಯಾಪದಗಳು, ಲೇಖನಗಳು, ವಿಶೇಷಣಗಳು, ನಾಮವಾಚಕ ಮತ್ತು ಗುಣವಾಚಕ) ಹಂತಹಂತವಾಗಿ ಸರಳ ವಾಕ್ಯಗಳನ್ನು ರಚಿಸುವುದನ್ನು ಮಕ್ಕಳಿಗೆ ಹೇಳಿಕೊಡಲಾಯಿತು. ವಾಕ್ಯಗಳನ್ನು ಕಟ್ಟುವ, ಬರೆಯುವ, ಓದುವ ಮತ್ತು ಜೋರಾಗಿ ಓದುವ ವಿಷಯಗಳಲ್ಲಿ ಮಕ್ಕಳು ಐದು ತಿಂಗಳಿನಲ್ಲಿ ನಂಬಿಕೆ ಬೆಳೆಸಿಕೊಂಡಂತೆ ತಾವೇ ಸ್ವಂತವಾಗಿ ಬರೆಯಲು ಕೂಡ ಆರಂಭಿಸಿದರು. ನಂತರ ಪುಟ್ಟದಾದ ವಿವರಗಳನ್ನು ಬರೆಯಲು ಮುಂದೆ ಸಂಪೂರ್ಣ ಪ್ಯಾರಾಗಳನ್ನು ಮತ್ತು ಸಣ್ಣ ಕಥೆಗಳನ್ನು ಬರೆಯಲು ವರ್ಷದೊಳಗೆ ಸಮರ್ಥರಾದರು.

- ಓದಿದ ಅಥವಾ ಕೇಳಿಸಿಕೊಂಡ ಬರಹವನ್ನು ಚಿತ್ರದ ಮೂಲಕ ನಿರೂಪಿಸುವುದನ್ನು ಪ್ರೋತ್ಸಾಹಿಸಲಾಯಿತು. ಇದರಿಂದ ಮಕ್ಕಳು ಎಷ್ಟರಮಟ್ಟಿಗೆ ಗ್ರಹಿಸಿದ್ದಾರೆ ಎನ್ನುವುದನ್ನು ಶಿಕ್ಷಕರು ತಿಳಿಯಲು ಅನುಕೂಲವಾಯಿತು. ಈ ಪ್ರಕ್ರಿಯೆಯಲ್ಲಿ ಆಸಕ್ತಿಕರವಾದ ಕಡಿಮೆ ವೆಚ್ಚದ ಹಲವು ಸಾಮಗ್ರಿಗಳು ಮೂಡಿಬಂದವು.

- ಅದೇ ಸಮಯದಲ್ಲಿ ಇತರ ರೀತಿಗಳನ್ನು ಪ್ರಯತ್ನಿಸಿದೆವು – ಸೂಕ್ಷ್ಮವಾಗಿ ಆರಿಸಿದ ಹಾಡುಗಳು ಮತ್ತು ಕಥೆಗಳನ್ನು ಕೇಳುವುದು, ಚಲನಚಿತ್ರಗಳನ್ನು ನೋಡುವುದು, ಶಿಕ್ಷಕರು ಮತ್ತು ಅತಿಥಿಗಳ ಜೊತೆಗೆ ಇಂಗ್ಲಿಷ್‌ನಲ್ಲೇ ವ್ಯವಹರಿಸುವುದು. ಈ ಎಲ್ಲವೂ ಮಕ್ಕಳು ಭಾಷೆಯೆಡೆಗೆ ಆಸಕ್ತಿಯನ್ನು ಮತ್ತು ಸಂವೇದನೆಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡಿದವು.

**ಸಂಖ್ಯಾ ಜ್ಞಾನದ ಕಲಿಕೆ**

ಒಂದು ರೀತಿಯಲ್ಲಿ ಇದನ್ನು ಸುಲಭವಾಗಿ ಸಾಧಿಸಲು ಸಾಧ್ಯವಾಯಿತು. ಜೋಡಿಸುವ ಚಟುವಟಿಕೆಯ ಸಾಮಗ್ರಿಗಳನ್ನು ಶಾಲೆಯೊಳಗೇ ರಚಿಸಿದೆವು. ಹೊರಗಿನ ಸಂಸ್ಥೆಗಳಾದ ಜೋಡೋ ಗ್ಯಾನ್‌ನಂತಹ ಸಂಸ್ಥೆಗಳಿಂದ ಪಡೆದ ಕೆಲವು ಸಾಮಗ್ರಿಗಳನ್ನು ನಮ್ಮ ಅಗತ್ಯಗಳಿಗೆ ಮತ್ತು ಸಂಪನ್ಮೂಲಗಳಿಗೆ ತಕ್ಕಂತೆ ಬದಲಾಯಿಸಿಕೊಳ್ಳಲಾಯಿತು.

ಒಂದೇ ಪರಿಕಲ್ಪನೆಯ ಮೇಲೆ ಹಲವಾರು ಸಾಮಗ್ರಿಗಳನ್ನು ರಚಿಸಿ, ಇವುಗಳನ್ನು ವಿವಿಧ ವಿದ್ಯಾರ್ಥಿಗಳಿಗೆ, ಸಂಖ್ಯಾ ದೌರ್ಬಲ್ಯ ಇದ್ದವರಿಗೂ ಕೂಡ ನೀಡಲಾಯಿತು. ಸಾಮಾನ್ಯವಾಗಿ ಗಣಿತದ ಸಾಮಗ್ರಿಗಳು ಕೆಳಗಿನ ತರಗತಿಗಳಿಗೆ ಮೀಸಲಾಗಿರುತ್ತವೆ. ಮೊಟ್ಟಮೊದಲ ಬಾರಿಗೆ ನಾವು ಬೀಜಗಣಿತ ಮತ್ತು ರೇಖಾಗಣಿತ ಇವುಗಳಿಗೂ ಕುಶಲತೆಯಿಂದ ಮಾಧ್ಯಮಿಕ ಶಾಲೆಯ ಮಟ್ಟದಲ್ಲಿ ಈ ಸಾಮಗ್ರಿಗಳನ್ನು ರಚಿಸಿದೆವು. ಇದರಿಂದಾಗಿ ಮಾಧ್ಯಮಿಕ ಶಾಲಾ ಮಕ್ಕಳ ಪರಿಕಲ್ಪನೆಗಳ ಅರ್ಥ ಗ್ರಹಿಕೆಯು ಹೆಚ್ಚಾದುದನ್ನು ನಾವು ಗಮನಿಸಿದೆವು.

**ಇತರ ವಿಷಯಗಳು**

ವಿಶ್ವದಾದ್ಯಂತ ಸಾಮಾನ್ಯವಾದ ಶಾಲಾ ವಿಷಯಗಳಾದ ಚರಿತ್ರೆ, ಭೂಗೋಳ ಮತ್ತು ವಿಜ್ಞಾನಗಳ ಬೋಧನೆಗಾಗಿ ಬೇರೆಬೇರೆ ಕಡೆಗಳಲ್ಲಿ ಅಭಿವೃದ್ಧಿಪಡಿಸಲಾದ ಎಲ್ಲಾ ಶ್ರೀಮಂತ ಶಿಕ್ಷಣಶಾಸ್ತ್ರ ಪ್ರಯೋಗಗಳನ್ನು ಗಮನಿಸಿ ಅವುಗಳಲ್ಲಿ ಸೂಕ್ತವಾದುದನ್ನು ಪ್ರಯತ್ನಿಸಲು ನಮಗೆ ಮುಕ್ತ ಅವಕಾಶವಿದ್ದಿತು. ಸುತ್ತಮುತ್ತಲಿನ ಪ್ರದೇಶಗಳಿಗೆ ಹೋಗಿ ಸ್ಥಳೀಯರೊಡನೆ ಮಾತನಾಡಿ ಸಂದರ್ಶಿಸಲು ಮತ್ತು ವಿಷಯ ಸಂಗ್ರಹಿಸಲು ಭೇಟಿ ನೀಡುವುದು, ಪ್ರಸ್ತುತ ವಿದ್ಯಮಾನಗಳ ಬಗ್ಗೆ ಚರ್ಚಿಸುವುದು, ತಳಮಟ್ಟದಿಂದ ಆರಂಭಿಸಿ ಜಾಗತಿಕ ಮಟ್ಟದವರೆಗೆ ಚರಿತ್ರೆ ಮತ್ತು ಭೂಗೋಳಗಳನ್ನು ಕಲಿಯುವುದು, ಖುದ್ದು ಪ್ರಯೋಗಗಳನ್ನು ಮಾಡುವುದು ಹಾಗೂ ಸುಲಭವಾಗಿ ದೊರಕುವ ವಸ್ತುಗಳಿಂದ ದುರಸ್ತಿ ಮಾಡುವುದು, ಪರಿಸರ ವಿಜ್ಞಾನದ ಬಗ್ಗೆ ಒತ್ತು ನೀಡುವುದು ಹಾಗೂ ದಿನನಿತ್ಯದ ಸೂಕ್ತ ವರ್ತನೆಗಳ ಬಗ್ಗೆ ಕೆಲಸ ಮಾಡುವುದು, ದಿನದ ಅಡುಗೆ ಹೇಳಿಕೊಡುವುದು, ಕಲಾ ಗ್ಯಾಲರಿಗಳಿಗೆ ಭೇಟಿ ನೀಡುವುದು. ನಾಟಕಗಳನ್ನು ಪಠ್ಯದ ಜೊತೆಗೆ ಹೊಂದಿಸುವುದು, ಪೋಷಕರೇ ಮಾಪಕರಾಗಿ ಇರುವಂತಹ ವಾರ್ಷಿಕ ಪರೀಕ್ಷೆಗಳನ್ನು ನಡೆಸುವುದು, ತಮ್ಮ ಪ್ರಗತಿಯನ್ನು ಮಾಪನ ಮಾಡುವುದು ಹೇಗೆ ಎನ್ನುವುದನ್ನು ಕಲಿಯುವುದು – ಹೀಗೆ ಕಲಿಕೆಯನ್ನು ಬಲಪಡಿಸುವ ಏನೆಲ್ಲವನ್ನು ಪ್ರಯತ್ನಿಸಲು ಶಾಲೆ ಸಿದ್ಧವಿದ್ದಿತು.

**ಮುಕ್ತ ವಲಯದ ತಂತ್ರ**

ಇವುಗಳು ಮಕ್ಕಳಲ್ಲಿ ಅಭ್ಯಾಸ ಮಾಡಲು ಮತ್ತು ಸ್ವಂತವಾಗಿ ಕಲಿಯಲು ಉತ್ತೇಜಿಸಿದವು. 45 ನಿಮಿಷಗಳ ಅವಧಿಯಲ್ಲಿ ವಿದ್ಯಾರ್ಥಿಗಳು ತಾವೇ ವಿವಿಧ ವಿಷಯಗಳಲ್ಲಿ ಕೊಟ್ಟಿರುವ ಅಭ್ಯಾಸ ಹಾಳೆಗಳನ್ನು ಮಾಡಿ ಮುಗಿಸಬೇಕಿತ್ತು. ಯಾವುದೇ ಶಿಕ್ಷಕರ ಉಪಸ್ಥಿತಿ ಇಲ್ಲದೆ, ಸ್ವಂತವಾಗಿ ಸರಿಪಡಿಸಿಕೊಳ್ಳುವ ವಿಧಾನಗಳನ್ನು ಕೂಡ ಹೇಳಿಕೊಡಲಾಯಿತು. ಕೆಲವೊಮ್ಮೆ ನಿಯಮಗಳನ್ನು ಮೀರುವುದು ಮತ್ತು ಸರಿಯಾಗಿ ಮಾಡದಿರುವುದು ಕಂಡುಬರುತಿತ್ತು. ಅದರೂ, ಸ್ವತಂತ್ರವಾಗಿ ಕಲಿಯುವುದನ್ನು ಕಲಿತಿರುವ ಮಕ್ಕಳು ತಯಾರಾಗುತ್ತಿದ್ದರು.

**ಕಲೆ**

ಮಕ್ಕಳು ಮತ್ತು ಶಿಕ್ಷಕರು ಇಬ್ಬರ ಬದುಕಿನ ಆಳದಲ್ಲಿ ರೂಪು ಪಡೆದಿದ್ದರಿಂದ ಕಲೆ, ಮತ್ತು ಅದು ಏನೆಲ್ಲವನ್ನೂ ಒಳಗೊಂಡಿರುತ್ತದೆಯೋ ಎಲ್ಲವೂ ನಮ್ಮ ಬದುಕಿನ ಭಾಗವಾಗಿ ಹೋಯಿತು. ಕಲೆ ಎನ್ನುವುದು ಕೇವಲ ಒಂದು ತರಗತಿಯೋ ಅಥವಾ ಸಹಪಠ್ಯವೋ ಆಗಿರಲಿಲ್ಲ. ಅದು ಎಲ್ಲೆಲ್ಲೂ ಇದ್ದಿತು–ಗೋಡೆಗಳ ಮೇಲೆ, ಬಾಗಿಲುಗಳ ಮೇಲೆ, ಪುಸ್ತಕಗಳ ಮೇಲೆ, ಕಾಗದಗಳ ಮೇಲೆ, ಮತ್ತು ಬಟ್ಟೆಗಳ ಮೇಲೆ, ಹೀಗೆ ಅದು ಎಲ್ಲಾ ಮಾಪನಗಳಲ್ಲೂ, ಪರೀಕ್ಷೆಗಳಲ್ಲೂ ಸೇರಿಹೋಗಿತ್ತು.

**ಚಲನ ಚಿತ್ರಗಳು, ಹಾಡುಗಳು ಮತ್ತು ಸಂಗೀತ**

ಡಿಸ್ಲೆಕ್ಸಿಯಾ ಹೊಂದಿರುವ ಮಕ್ಕಳಲ್ಲಿ ಉತ್ತಮವಾದುದನ್ನು ಇವು ಸಾಮಾನ್ಯವಾಗಿ ಹೊರತರುವುದರಿಂದ ನಾವು ಇವುಗಳನ್ನು ಆಧಾರಗಳನ್ನಾಗಿಯೂ, ಆಕಾರಗಳನ್ನಾಗಿಯೂ ಉಪಯೋಗಿಸಿದೆವು. ಇವನ್ನು ಅವರು ಓದಬೇಕಾಗಿರಲಿಲ್ಲವಾದ್ದರಿಂದ, ಅವರು ಚರ್ಚೆಗಳಲ್ಲಿ, ಚಟುವಟಿಕೆಗಳಲ್ಲಿ ಉತ್ತಮ ಒಳ ದೃಷ್ಟಿಗಳೊಂದಿಗೆ ಕೆಲವೊಮ್ಮೆ ಉಳಿದೆಲ್ಲ ಮಕ್ಕಳಿಗಿಂತ ಉತ್ತಮವಾಗಿ ಭಾಗವಹಿಸುತ್ತಿದ್ದರು. ಹಾಗೂ ಇತರ ಮಕ್ಕಳಂತೆಯೇ ಆಸಕ್ತಿಯಿಂದ ಸಂಬಂಧಪಟ್ಟ ಅಭ್ಯಾಸಗಳನ್ನು ಮಾಡುತ್ತಿದ್ದರು.

**ಶಾಲೆಯನ್ನು ಮುಚ್ಚಲಾಯಿತು**

ಶ್ರೀಮಂತ ಶಿಕ್ಷಣ ಪದ್ಧತಿ ಇದ್ದರೂ ಕೂಡ 'ಶಿಕ್ಷಾಮಿತ್ರ' ಅಗತ್ಯವಿದ್ದಷ್ಟು ಮಕ್ಕಳನ್ನು ಆಕರ್ಷಿಸಲಿಲ್ಲ. ತಂದೆಯಾದವರು ಸಾಂಪ್ರದಾಯಿಕ ಶಾಲಾಶಿಕ್ಷಣವನ್ನು ಇಷ್ಟಪಡುತ್ತಿದ್ದರು. ಹಾಗಾಗಿ ಅಂತಿಮವಾಗಿ

ಆರ್ಥಿಕ ಸಂಪನ್ಮೂಲ ಇಲ್ಲದಿರುವುದು, ಆರ್‌ಟಿಇ ಬಂದದ್ದು ಮುಂತಾದ ಕಾರಣಗಳಿಂದಾಗಿ ಮುಚ್ಚಬೇಕಾಗಿತ್ತು. ಮೆಚ್ಚಿನ ಮಕ್ಕಳು ಸರ್ಕಾರಿ ಶಾಲೆಗಳನ್ನು ಸೇರಿದರು. ಕೆಲವರು ಕಾಲೇಜು ಹಂತಕ್ಕೂ ತಮ್ಮ ಶಿಕ್ಷಣವನ್ನು ಮುಂದುವರೆಸಿದರೆ, ಉಳಿದವರು ನೌಕರಿಗೆ ಸೇರಿದರು.

**ಶಿಕ್ಷಾಮಿತ್ರ ಸಂಪನ್ಮೂಲ ಕೇಂದ್ರ**

ಶಿಕ್ಷಣ ಪದ್ಧತಿಯನ್ನು, ಇತರ ಸಂಸ್ಥೆಗಳೊಂದಿಗೆ ಹಂಚಿಕೊಳ್ಳಲು ೨೦೦೭ರಿಂದ ಶಿಕ್ಷಾಮಿತ್ರವು ಆರಂಭಿಸಿತು. ೨೦೧೧ರಲ್ಲಿ ಶಾಲೆಯು ಮುಚ್ಚಿದ ನಂತರ, ಈ ಸಂಸ್ಥೆಯು ಇತರರಿಗೆ ತರಬೇತಿ ನೀಡುವುದು, ಸಾಮಗ್ರಿಗಳನ್ನು ರಚಿಸುವುದು ಮತ್ತು ವಿತರಿಸುವುದನ್ನು ಪೂರ್ಣಾವಧಿಯ ಚಟುವಟಿಕೆಯನ್ನಾಗಿ ಆರಂಭಿಸಲಾಯಿತು.

**ಬಂಗಾಲಿ ತರಬೇತಿ**

ಶೀಘ್ರದಲ್ಲಿ ಓದುವುದು ಮತ್ತು ಕಲಿಯುವುದನ್ನು ಬಂಗಾಲಿಯಲ್ಲಿ ಕಲಿಸುವ ಪದ್ಧತಿಗಳ ತರಬೇತಿಯನ್ನು ಮೂರು ದಿನಗಳ ಕಾರ್ಯಾಗಾರದ ಮೂಲಕ ಆರಂಭಿಸಲಾಯಿತು. ವಿವಿಧ ಹಿನ್ನೆಲೆಯ ಶಿಕ್ಷಕರಲ್ಲಿ ಇದು ಆಸಕ್ತಿಯನ್ನು ಕೆರಳಿಸಿತು ಎನ್ನುವುದು ನಮ್ಮ ಅರಿವಿಗೆ ಬಂದಿತು. ಒಂದು ಬರಹವನ್ನು ವಿಶ್ಲೇಷಿಸುವುದು, ಅಭಿಪ್ರಾಯವನ್ನು ವ್ಯಕ್ತಪಡಿಸುವುದು, ತಮ್ಮದೇ ಆದ ಬರಹಗಳನ್ನು ತಯಾರಿಸುವುದು, ಇವುಗಳ ಮೂಲಕ ಶಿಕ್ಷಕರಲ್ಲಿ ಸಬಲತೆಯ ಮತ್ತು ಆನಂದದ ಭಾವನೆಗಳನ್ನು ಮೂಡಿಸಿದವು. ಈ ಪದ್ಧತಿಯನ್ನು ಅಳವಡಿಸಿಕೊಳ್ಳಲು ಅವರು ಧೈರ್ಯತಳೆದರು. ಕೋಲ್ಕತ್ತಾ ಹಾಗೂ ಪಶ್ಚಿಮ ಬಂಗಾಳದ ಇತರ ಜಿಲ್ಲೆಗಳಿಂದ ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಂದ ನಾವು ಅನೇಕ ಸರ್ಕಾರಿ ಶಾಲೆಯ ಶಿಕ್ಷಕರಿಗೆ ತರಬೇತಿ ನೀಡಿದೆವು.

ಜೊತೆಗೆ ಇಂಗ್ಲಿಷ್ ಮಾಧ್ಯಮ ಶಾಲೆಯ ಶಿಕ್ಷಕರು ಕಿಷ್ಟ ಪರಿಸರದ ಮಕ್ಕಳೊಡನೆ ಅಂದರೆ ಕೆಲಸ ಮಾಡುತ್ತಿರುವ ರೈಲ್ವೆ ಪ್ಲಾಟ್-ಫಾರ್ಮ್‌ಗಳು, ಬೀಡಿ ಕಾರ್ಮಿಕರು, ಚಿಂದಿ ಆಯುವವರ ಮಕ್ಕಳು, ಬುಡಕಟ್ಟು ಜನಾಂಗದವರು, ಕೋಲ್ಕತ್ತಾ ಮತ್ತಿತರ ಊರುಗಳ ಹಲವಾರು ಸ್ಲಂಗಳಲ್ಲಿ ವಾಸಿಸುವ ಮಕ್ಕಳು ಇಂತಹ ಮಕ್ಕಳೊಡನೆ ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಗಳ (ಎನ್‌ಜಿಒ) ಶಿಕ್ಷಕರಿಗೂ ಕೂಡ ತರಬೇತಿ ನೀಡಿದೆವು. ಈ ಗುಂಪುಗಳು ತಮ್ಮ ಪರಿಸರಕ್ಕೆ ಹೊಂದುವ ಹಲವಾರು ಬರಹಗಳನ್ನು ರಚಿಸಿದರು. ಬೋಧನಾ ಕಲಿಕಾ ಸಾಮಗ್ರಿಗಳು, ಅಭ್ಯಾಸ ಪುಸ್ತಕಗಳು ಮತ್ತು ಶಿಕ್ಷಾಮಿತ್ರ ರಚಿಸಿದ ಪುಸ್ತಕಗಳು ನಿರಂತರವಾಗಿ ಬೇಡಿಕೆಯಲ್ಲಿವೆ.

**ಇಂಗ್ಲಿಷ್ ತರಬೇತಿ**

ಮೂಲ ಇಂಗ್ಲಿಷ್‌ನ ಅಡಿಪಾಯಗಳು ಎಂಬ ನಮ್ಮ ತರಬೇತಿಯು ಬಹಳ ಪ್ರಸಿದ್ಧವೂ ಮತ್ತು ಇದು ಶಿಕ್ಷಾಮಿತ್ರದ ಹೆಚ್ಚು ಬೇಡಿಕೆಯಲ್ಲಿರುವ ತರಬೇತಿ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಭಾರತದ ವಿವಿಧ ರಾಜ್ಯಗಳಲ್ಲಿ ಹರಿಯಾಣ, ಈಶಾನ್ಯ ರಾಜ್ಯಗಳು ಮತ್ತು ಬಿಹಾರ್ ಇಲ್ಲಿ ಈ ತರಬೇತಿಯನ್ನು ನೀಡಲಾಗಿದೆ. ಅಜೀಂ ಪ್ರೇಮ್‌ಜಿ ಫೌಂಡೇಷನ್ ಶಾಲೆಗಳಲ್ಲಿ, ಬೆಂಗಳೂರಿನ ಹಲವಾರು ಶಾಲೆಗಳಲ್ಲಿ ಮತ್ತು ಬಾಂಗ್ಲಾದೇಶದಲ್ಲಿ ಅವುಗಳನ್ನು ಬಳಸಲಾಗಿದೆ. ಹೊಸದಾಗಿ ಇಂಗಿಷನ್ನು ವಿನೂತನ ರೀತಿಯಲ್ಲಿ ಕಲಿಸುವ ಈ ಕಾರ್ಯಕ್ರಮವು ಇಂಗ್ಲಿಷಿನಲ್ಲಿ ದುರ್ಬಲ ಕಲಿಕೆ ಇದ್ದ ಶಿಕ್ಷಕರಿಗೆ ಬಹಳ ಸಹಕಾರಿಯಾಗಿದೆ.

ಎರಡನೇ ತರಗತಿಯಿಂದ, ಏಳನೇ ತರಗತಿಯವರೆಗಿನ ಸರ್ಕಾರಿ ಶಾಲೆಯ ಶಿಕ್ಷಕರು (ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ) ಈ ಕಾರ್ಯಕ್ರಮವನ್ನು ಫಲಪ್ರದವಾಗಿ ಬಳಸುತ್ತಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಕಲಿಯದಿದ್ದ ಮಕ್ಕಳಿಗೆ ಕಡಿಮೆ ಸಮಯದಲ್ಲಿ ಪರಿಹಾರ ಪದ್ಧತಿಯಲ್ಲಿ ಇಂಗ್ಲಿಷ್ ಕಲಿಸುವ ಸಾಧನವಾಗಿ ಉಪಯೋಗಿ-ಸುತ್ತಿದ್ದಾರೆ. ಹರಿಯಾಣ ಸರ್ಕಾರದ ಸಂಪನ್ಮೂಲ ಶಿಕ್ಷಕರು ತರಬೇತಿಯ ನಂತರ ಹೇಳಿದ ಮೊದಲ ಮಾತೆಂದರೆ ಈ ತರಬೇತಿ ಕಾರ್ಯಕ್ರಮವು ತರಗತಿಯಲ್ಲಿ ನಿಜಕ್ಕೂ ಮಾಡಬೇಕಾದುದು ಏನು ಎಂಬುದನ್ನು ತಿಳಿಸಿತು, ಕೇವಲ ಇತರ ತರಬೇತಿ ಕಾರ್ಯ-ಕ್ರಮಗಳಂತೆ ಸಿದ್ಧಾಂತಗಳನ್ನು ಅಷ್ಟೇ ಹೇಳಲಿಲ್ಲ. ಬಂಗಾಲಿ ತರಬೇತಿಯಲ್ಲಿದ್ದಂತೆ ಅಭ್ಯಾಸ ಪುಸ್ತಕಗಳ ತಯಾರಿಯು ಈಗಾಗಲೇ ನಿರೂಪಿತವಾಗಿರುವಂತೆ ಕಲಿಕಾ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

**ಗಣಿತ ತರಬೇತಿ**

ನಮ್ಮ ಭಾಷಾ ತರಬೇತಿ ಕಾರ್ಯಕ್ರಮವನ್ನು ಉಪಯೋಗಿಸಿ-ಕೊಂಡಿದ್ದ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಕಲಿಕಾ ಸಂಸ್ಥೆಗಳು ಗಣಿತ ಕಾರ್ಯಾಗಾರಗಳಿಗೂ ಬೇಡಿಕೆ ನೀಡಿದವು.

ನಮ್ಮ ಗಣಿತ ಕಲಿಕಾ ಸಾಮಗ್ರಿಗಳನ್ನು ಭಾರತದ ಹಲವಾರು ಭಾಗದ ಶಾಲೆಗಳು ಮತ್ತು ವೈಯಕ್ತಿಕವಾಗಿಯೂ ಖರೀದಿಸಿದ್ದಾರೆ. ಖರ್ಚು ಕಡಿಮೆ ಮಾಡಿಕೊಳ್ಳಲು ಕೆಲವು ಶಾಲೆಗಳು ಸಾಮಗ್ರಿಗಳನ್ನು ತಾವೇ ತಯಾರಿಸಿಕೊಂಡರು. ಸಾಮಗ್ರಿಗಳನ್ನು ಪಾಲ್ಗೊಂಡವರು ತಮ್ಮದೇ ಆದ ರೀತಿಯಲ್ಲಿ ಮಾಡಿಕೊಂಡಾಗಲೇ ಗಣಿತ ಕಲಿಕೆಯು ಹೆಚ್ಚು ಸುಲಭವಾಗುತ್ತದೆ ಎಂದು ಶಿಕ್ಷಾಮಿತ್ರವು ಈ ಕಾರ್ಯಾಗಾರಗ-ಳಿಂದಲೇ ಕಂಡುಕೊಂಡಿತು. ಆಗಿನಿಂದಲೂ ಈ ಪ್ರಕ್ರಿಯೆಯನ್ನೇ ಪ್ರೋತ್ಸಾಹಿಸಲಾಗುತ್ತದೆ. ಹಲವಾರು ಸಂಸ್ಥೆಗಳು ಮತ್ತು ಶಾಲೆಗಳಲ್ಲಿ ಗಣಿತ ಮತ್ತು ಬಂಗಾಲಿ ಕಲಿಸಲು ಸಂಪನ್ಮೂಲ ವ್ಯಕ್ತಿಗಳನ್ನು ರೂಪಿಸಲಾಗಿದೆ. ಆದರೆ ಇಂಗ್ಲಿಷ್ ಶಿಕ್ಷಕರನ್ನು ಹುಡುಕುವುದು ಒಂದು ಸವಾಲಿನ ಕೆಲಸವೇ ಆಗಿ ಉಳಿದಿದೆ.

ಶಿಕ್ಷಾಮಿತ್ರವು ಶೈಕ್ಷಣಿಕ ಸಂಪನ್ಮೂಲ ಕೇಂದ್ರವಾಗಿ ಕೆಲಸ ಮಾಡುತ್ತಿದ್ದು ಶಿಕ್ಷಣ ಶಾಸ್ತ್ರದ ಜ್ಞಾನವನ್ನು, ಸಾಮಗ್ರಿಗಳನ್ನು ಪೂರೈಸಲು ಹಾಗೂ ಭಾರತದ ಹಲವಾರು ರಾಜ್ಯಗಳಲ್ಲಿನ ಅನೇಕ ಶಾಲೆಗಳಿಗೆ, ಸಂಸ್ಥೆಗಳಿಗೆ ಮತ್ತು ಪೋಷಕರಿಗೂ ಕೂಡ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದೆ. ಎಲ್ಲ ಮಗುವಿಗೂ ಕಲಿಕೆ ಸಾಧ್ಯ, ಕೇವಲ ಅವಕಾಶಗಳನ್ನು ನೀಡಬೇಕು ಅಷ್ಟೇ ಎಂಬ ದೃಢ ನಂಬಿಕೆಯೇ ನಮ್ಮ ಚಲನಶಕ್ತಿ.



ವೃತ್ತಿಯಲ್ಲಿ ವಿಶೇಷ ಶಿಕ್ಷಕಿಯಾಗಿರುವ **ಸುದೇಷ್ಣಾ ಸಿನ್ಹಾ** ಅವರು ಪ್ರಯೋಗಾತ್ಮಕ ಪ್ರಾಥಮಿಕ ಶಾಲೆಗಳನ್ನು ಆರಂಭಿಸುವುದು (ಸೇಂಟ್ ಜೋಸೆಫ್ ಶಾಲೆಯಲ್ಲಿ ಆಶೀರ್ವಾದ್ ವಿದ್ಯಾಲಯ ಮತ್ತು ಶಿಕ್ಷಾಮಿತ್ರ), ಪಠ್ಯಕ್ರಮ ರಚನೆ, ಶಿಕ್ಷಣಶಾಸ್ತ್ರ, ಸಾಮಗ್ರಿಗಳು, ಪುಸ್ತಕಗಳು ಮತ್ತು ಮೌಲ್ಯಮಾಪನ ಸಾಧನಗಳು ಇವುಗಳ ರಚನೆಯಲ್ಲಿ ಹೆಚ್ಚಾಗಿ ತೊಡಗಿಕೊಂಡಿದ್ದಾರೆ. ಮಕ್ಕಳು ಮತ್ತು ಶಿಕ್ಷಕರಿಗೆ ಸರಳ ಭಾಷೆಯಲ್ಲಿ ಪುಸ್ತಕಗಳು ಮತ್ತು ಲೇಖನಗಳನ್ನು ಬರೆದು ಸಿದ್ಧಪಡಿಸುವುದು ಮತ್ತು ಶಿಕ್ಷಕರ ತರಬೇತಿ ಇವರ ವಿಶೇಷ ಆಸಕ್ತಿಯ ಕ್ಷೇತ್ರಗಳು. ಪರಿಣಾಮಕಾರಿ ಬೋಧನೆಗಾಗಿ ಅದರಲ್ಲೂ ಮುಖ್ಯವಾಗಿ ಭಾಷಾ ಶಿಕ್ಷಣಕ್ಕಾಗಿ ಪದ್ಧತಿ ಮತ್ತು ಸಾಮಗ್ರಿಗಳನ್ನು ವಿನ್ಯಾಸಗೊಳಿಸುವುದು ಅವರ ವಿಶೇಷ ಪರಿಣತಿಯಾಗಿದೆ. ಟೀಚರ್ಸ್ ಸೆಂಟರ್, ಮಾಡರ್ನ್ ಅಕಾಡೆಮಿ ಆಫ್ ಕಂಟಿನ್ಯೂಯಿಂಗ್ ಎಜುಕೇಶನ್, ದಿಗಂತರ್, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾನಿಲಯ ಮತ್ತು ವಿಪ್ರೋ ಫೌಂಡೇಷನ್ ಮುಂತಾದೆಡೆ ಸಂಪನ್ಮೂಲ ಶಿಕ್ಷಕಿಯಾಗಿ ಅವರು ತರಗತಿಗಳನ್ನು ತೆಗೆದುಕೊಂಡಿದ್ದಾರೆ. ಬಾಂಗ್ಲಾದೇಶದ ಒಂದು ಪರ್ಯಾಯ ಶಾಲೆಗೆ ಮತ್ತು ಪಶ್ಚಿಮ ಬಂಗಾಳದ ಅರಿಯಾದಹದಲ್ಲಿನ ಟೆಕ್ನೋ ಇಂಡಿಯಾ ಶಾಲೆಯ ಗುಂಪುಗಳಿಗೆ ಸಂಪನ್ಮೂಲ ಸಲಹೆಗಾರರಾಗಿದ್ದಾರೆ. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ಗೂ ಕೂಡ ಅವರು ಸಲಹೆಗಾರರಾಗಿದ್ದಾರೆ. ಅವರ ಸಂಸ್ಥೆ ಶಿಕ್ಷಾಮಿತ್ರದ ಜೊತೆಗೆ ಅವರು ಪ್ರಸ್ತುತ ವಿಪ್ರೋ ಫೌಂಡೇಷನ್‌ಗೂ ಕೂಡ ಸಂಪನ್ಮೂಲ ನೀಡುವವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರನ್ನು shompare@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ದನ ಸಿ ಎಸ್** । ಪರಿಶೀಲನೆ: **ಲತಾ ಕೆ ಸಿ**